**<u>ಅಸಲು ದಾವಾ ಸಂಖ್ಯೆ - 181/2018</u>** **ಪಿ.ಡಬ್ಲ್ಯೂ:-1**

ದಿನಾಂಕಃ **23-11-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿಗಳ ಪರ ವಕೀಲರಿಂದ :-</u>

ವಾದಿ ನನ್ನ ಗಂಡನಾಗಬೇಕು. ವಾದಿಗೆ ಜಾಸ್ತಿ ಕೆಮ್ಮು ಇರುತ್ತದೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯು ಆರೋಗ್ಯವಾಗಿದ್ದಾರೆ ಒಂದು ವೇಳೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ಹೇಳಿದರೆ ಎಲ್ಲಿ ಸತ್ಯ ಸಂಗತಿ ಹೊರ ಬರುತ್ತದೆ ಎಂಬ ದುರುದ್ದೇಶದಿಂದ ನಾನು ಅವರಿಂದ ಮುಖ್ತಾರನಾಮೆಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಆರೋಗ್ಯವಾಗಿದ್ದಾರೆ ಮತ್ತು ನ್ಯಾಯಾಲಯಕ್ಕೆ ಹಾಜರಾಗಲು ಶಕ್ತರಾಗಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಅಣ್ಣನಾಗಬೇಕು. ಪ್ರತಿವಾದಿ 2 ರಿಂದ 4 ನನ್ನ ಅಣ್ಣನ ಮಕ್ಕಳು. ನನಗೆ ಒಬ್ಬ ತಮ್ಮ ಮತ್ತು ಇಬ್ಬರೂ ಅಣ್ಣಂದಿರು ಅಂದರೆ ದೇವೇಂದ್ರಪ್ಪ, 1 ನೇ ಪ್ರತಿವಾದಿ ಮತ್ತು ಮಂಜುನಾಥ. ದೇವೇಂದ್ರಪ್ಪ ಮತ್ತು ಮಂಜುನಾಥ ಈಗ ಜೀವಂತ ಇರುವುದಿಲ್ಲ. ದೇವೇಂದ್ರಪ್ಪ ಮತ್ತು ಮಂಜುನಾಥರವರು ಮರಣ ಹೊಂದಿರುವ ಬಗ್ಗೆ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮಂಜುನಾಥರವರು ತೀರಿಕೊಂಡಿರುವುದಿಲ್ಲ ಸುಮಾರು 25 ವರ್ಷಗಳ ಹಿಂದೆ ಊರನ್ನು ಬಿಟ್ಟು ಹೊರಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ದೇವೇಂದ್ರಪ್ಪರವರ ಹೆಂಡತಿಯ ಹೆಸರು ಲಲಿತಮ್ಮ. ದಾವಾ ಆಸ್ತಿಯ ಖಾತೆ ಈಗ ಲಲಿತಮ್ಮನ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಖಾತೆ ಹಿಂದೆ ವಾದಿಯ ಹೆಸರಿನಲ್ಲಿತ್ತು ಈಗ್ಗೆ ಸುಮಾರು 6-7 ವರ್ಷಗಳ ಹಿಂದೆ ಲಲಿತಮ್ಮರವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ದೇವೇಂದ್ರಪ್ಪ ರವರಿಂದ ನಮ್ಮ ಯಜಮಾನರು ಖರೀದಿ ಮಾಡಿದ್ದಾರೆ ಆದರೆ ನಿರ್ದಿಷ್ಟವಾದ ವರ್ಷ ನನಗೆ ನೆನಪಿಲ್ಲ. ದಾವಾ ಆಸ್ತಿಯ

ವಿಸ್ತೀರ್ಣ ಮತ್ತು ಚಕ್ಕುಬಂಧಿ ನನಗೆ ನೆನಪಿಲ್ಲ. ವಾದ ಪತ್ರದಲ್ಲಿ ವಾದಿಯು ದಾವಾ ಆಸ್ತಿಯನ್ನು ನ್ಯಾಯಾಲಯದಲ್ಲಿ ಹರಾಜು ಮೂಲಕ ಖರೀದಿ ಮಾಡಿರುವುದು ಸರಿ. ದಾವಾ ಆಸ್ತಿಯನ್ನು ಎಸ್ ಆರ್ ನಂ.1721/1973-74 ದಿಃ 05-03-1974 ರಂತೆ ದೇವೇಂದ್ರಪ್ಪ ರವರು ಗೌಡರ ದೊಡ್ಡವೀರಪ್ಪನ ಮಗ ಈಶ್ವರಪ್ಪರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು ನ್ಯಾಯಾಲಯದ ಹರಾಜಿನಲ್ಲಿ ಖರೀದಿ ಮಾಡಿದ ಬಗ್ಗೆ ನಮ್ಮ ಬಳಿ ದಾಖಲೆ ಇರುವುದಿಲ್ಲ, ದಿಃ 27-09-1993 ರಂದು ವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ನ್ಯಾಯಾಲಯವು ಖರೀದಿ ಪ್ರಮಾಣ ಪತ್ರವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ 20-08-1999 ರಂದು ವಾದಿಯು ನ್ಯಾಯಾಲಯವು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮಾಡಿದ ಹರಾಜು ಪ್ರಕ್ರಿಯವನ್ನು ರದ್ದು ಮಾಡುವಂತೆ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಆಧಾರದ ಮೇಲೆ ನ್ಯಾಯಾಲಯವು ಹರಾಜು ಪ್ರಕ್ರಿಯವನ್ನು ರದ್ದು ಮಾಡಿ ಹರಾಜು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಂತರ ನಮ್ಮ ಯಜಮಾನರು ಸದರಿ ಆದೇಶವನ್ನು ಪ್ರಶ್ನಿಸಿ ಸಿ.ಆರ್.ಪಿ ನಂ.195/2000 ಮತ್ತು 196/2000 ಪ್ರಕರಣಗಳನ್ನು ಗೌ.ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ಆದೇಶವಾದ ನಂತರ ದಿಃ 22-10-2002 ರಂದು ವಾದಿಯು ಬಿಡ್ ಹಣವನ್ನು ವಾಪಾಸ್ಸು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ರೂ.4,375/-ಹಣವನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹೊನ್ನಾಳಿ ಬ್ಯಾಂಕ್ ರವರೊಂದಿಗೆ ದೇವೇಂದ್ರಪ್ಪ ರವರ ಹೆಂಡತಿ ಲಲಿತಮ್ಮ ಮತ್ತು 1 ನೇ ಪ್ರತಿವಾದಿ ರಾಜಿ ಮಾಡಿಕೊಂಡು ಅಮಲ್ಜಾರಿ ಸಂಖ್ಯೆ 326/19869 ರ ಅರ್ಜಿಯನ್ನು ಮುಕ್ತಾಯಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪ್ರಸ್ತುತ ಮಾರುಕಟ್ಟೆಯ ಬೆಲೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ವಾದಿಯ ಹೆಸರಿನಲ್ಲಿರುವ ಬಗ್ಗೆ ಇ-ಸ್ವತ್ತನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಹಿರಿಯ ಸಿವಿಲ್ ನ್ಯಾಯಾಲಯ ಹೊನ್ನಾಳಿಯಲ್ಲಿ ನಾನು, ಅನಿತ ಮತ್ತು ಶಾಂತರವರು ಅಸಲು ದಾವಾ ಸಂಖ್ಯೆ 58/2013 ದಾವೆಯನ್ನು ಲಲಿತಮ್ಮ,

ಲೀಲಾವತಿ, ಬಸವರಾಜಪ್ಪ ಮತ್ತು ರೂಪಾವತಿ ಮತ್ತು ಇತರರ ವಿರುದ್ಧ ಭಾಗಂಶವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ದಾವೆಯು ಡಿಕ್ರಿಯಾಗಿರುತ್ತದೆ. ಸದರಿ ಮೇಲ್ಕಂಡ ದಾವೆಯಲ್ಲಿ ಈ ದಾವೆಯ ದಾವಾ ಆಸ್ತಿಯು ಸಹ ಸೇರಿರಬಹುದು. ಸದರಿ ಮೇಲ್ಕಂಡ ದಾವೆಯಲ್ಲಿ ಐಟಂ ನಂ.6 ಮತ್ತು 7 ಈ ದಾವೆಯ ದಾವಾ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಕಂಡ ದಾವೆಯಲ್ಲಿ ಮಂಜುನಾಥರವರಿಗೂ ಸಹ ಆಸ್ತಿ ಭಾಗವಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಮರಣ ಹೊಂದಿದ ನಂತರ ನನ್ನ ತಾಯಿ ಮನೆಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ನಮ್ಮ ತಾಯಿ ಯಾವಾಗ ತೀರಿಕೊಂಡು ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.